ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು

**ಸಂ:ಗಣಕಶಾಖೆ/ಡಿಜಿ.ಲಾಕ್/01/2018-19** **ದಿನಾಂಕ:28/08/2018**

**- ಸುತ್ತೋಲೆ -**

**ವಿಷಯ:** ಏಪ್ರಿಲ್ ಮತ್ತು ಜೂನ್ 2018 ರ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳ ಅಂಕಪಟ್ಟಿಯನ್ನು ಡಿಜಿ ಲಾಕರ್ ಸೇವೆ ಆಧರಿಸಿ ಡೌನ್ ಲೋಡ್ ಮಾಡಿಕೊಳ್ಳುವ ಕುರಿತು.

*****

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ವಿವಿಧ ಚಟುವಟಿಕೆಗಳನ್ನು ಗಣಕೀಕರಣಗೊಳಿಸಲಾಗುತ್ತಿದ್ದು, ಪ್ರಸ್ತುತ ಏಪ್ರಿಲ್ ಮತ್ತು ಜೂನ್ 2018ರ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳ ಅಂಕಪಟ್ಟಿಯನ್ನು ಆನ್ ಲೈನ್‌ನಲ್ಲಿ ಡಿಜಿ ಲಾಕರ್ ಸೇವೆ ಮೂಲಕ ಪಡೆಯುವ ಸೌಲಭ್ಯವನ್ನು (ಡೌನ್‌ಲೋಡ್) ಮಾಡಿಕೊಳ್ಳಲು ಅವಕಾಶ ಕಲ್ಪಿಸಿಕೊಡಲಾಗಿದೆ.

ಡಿಜಿ ಲಾಕರ್ ಎನ್ನುವುದು ಭಾರತ ಸರ್ಕಾರವು ನಿರ್ವಹಿಸುತ್ತಿರುವ "ಡಿಜಿಟಲ್ ಲಾಕರ್" ಸೇವೆಯಾಗಿದ್ದು, ಇದು ಕೆಲವು ಅಧಿಕೃತ ದಾಖಲೆಗಳನ್ನು ಶೇಖರಿಸಿಡಲು ನಾಗರಿಕರಿಗೆ ನೆರವಾಗುತ್ತದೆ. ದಾಖಲೆಗಳನ್ನು ಸಾಗಿಸುವ ಅಗತ್ಯವನ್ನು ಕಡಿಮೆ ಮಾಡುವ ಉದ್ದೇಶವನ್ನು ಈ ಸೇವೆಯು ಹೊಂದಿದೆ.

ವಿದ್ಯಾರ್ಥಿಗಳು ಅಂಕಪಟ್ಟಿಯನ್ನು ಡೌನ್‌ಲೋಡ್ ಮಾಡಿಕೊಳ್ಳಲು, ಕೆಳಕಂಡ ವಿಧಾನಗಳನ್ನು ಪಾಲಿಸಬೇಕು.

1. http://digilocker.gov.in ಜಾಲತಾಣ ತಲುಪಬೇಕು.
2. ಡಿಜಿ ಲಾಕರ್‌ನ ಹೋಮ್ ಪೇಜ್ ತೆರೆದುಕೊಳ್ಳುತ್ತದೆ. ಸದರಿ ಹೋಮ್ ಪೇಜ್‌ನಲ್ಲಿ Sign-up ಬಟನ್ ಕ್ಲಿಕ್ ಮಾಡಿ, ಮೊಬೈಲ್ ನಂಬರ್ ನಮೂದಿಸಿದಾಗ, ನೀವು ನಮೂದಿಸಿದ ಮೊಬೈಲ್ ನಂಬರ್ ಗೆ OTP ಬರುತ್ತದೆ.
3. ಸದರಿ OTP ನಮೂದಿಸಿ Continue ಬಟನ್ ಕ್ಲಿಕ್ ಮಾಡಿದಾಗ, ನೀವು ಹೊಸದಾಗಿ User Name ಮತ್ತು Passwordನ್ನು Create ಮಾಡಿಕೊಂಡು (User Name ಮತ್ತು Passwordನ್ನು ಮುಂದಿನ ಪ್ರಕ್ರಿಯೆಗಳಿಗೆ ಅವಶ್ಯಕತೆ ಇರುವುದರಿಂದ Save ಮಾಡಿಕೊಳ್ಳಬೇಕು) Sign Up ಬಟನ್ ಕ್ಲಿಕ್ ಮಾಡಬೇಕು.
4. Sign Up ಬಟನ್ ಕ್ಲಿಕ್ ಮಾಡಿದಾಗ Enter your ಆಧಾರ್ ನಂಬರ್ ಎಂದು ಬರುತ್ತದೆ. ಆಧಾರ್ ನಂಬರ್ ನಮೂದಿಸಿದ ಕೂಡಲೇ, ನಿಮ್ಮ ಮೊಬೈಲ್ ನಂಬರ್‌ಗೆ OTP ಬರುತ್ತದೆ. OTP ನಮೂದಿಸಿ ಸಬ್‌ಮಿಟ್ ಮಾಡಿದಾಗ ಡಿಜಿ ಲಾಕರ್ ನ Sign Up ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ.
5. ವಿದ್ಯಾರ್ಥಿಯು ಈಗ ಮೊದಲು Create ಮಾಡಿರುವ User Name ಮತ್ತು Password ಬಳಸಿ Sign In ಆಗಬೇಕು.
6. Sign In ಆದ ಕೂಡಲೇ ಡಿಜಿ ಲಾಕರ್ ನ ಡ್ಯಾಶ್ ಬೋರ್ಡ್(Dash Board) ಪೇಜ್ ತೆರೆದುಕೊಳ್ಳತ್ತದೆ. ಅಲ್ಲಿ Issued Documents, ಮೇಲೆ ಕ್ಲಿಕ್ ಮಾಡಬೇಕು. ಅಲ್ಲಿ, Check Partners Section ಮೇಲೆ ಕ್ಲಿಕ್ ಮಾಡಿದಾಗ Pull Documents ಪೇಜ್ ತೆರೆದುಕೊಳ್ಳುತ್ತದೆ.
7. Pull Documents ಪೇಜ್‌ನ ಲ್ಲಿ Partner Name ಬಾಕ್ಸ್ ನಲ್ಲಿ Karnataka Secondary Education Examination Board select ಮಾಡಬೇಕು. Document type ಬಾಕ್ಸ್ ನಲ್ಲಿ Class X Maks sheet select ಮಾಡಬೇಕು. ಆ ರೀತಿ ಮಾಡಿದಾಗ ನಿಮ್ಮ ಹೆಸರು, ಜನ್ಮ ದಿನಾಂಕ ಮತ್ತು ಫೋಟೋ ಆಧಾರ್ ನಿಂದ Fetch ಆಗುತ್ತದೆ.
8. ಅದೇ ಪೇಜ್ ನಲ್ಲಿ Enter Reg No ಎಂದು ಬಾಕ್ಸ್ ಇರುತ್ತದೆ. ಆ ಬಾಕ್ಸ್‌ನಲ್ಲಿ ಎಸ್.ಎಸ್.ಎಲ್.ಸಿ ನೋಂದಣಿ ಸಂಖ್ಯೆಯನ್ನು ನಮೂದಿಸಿ, Declaration ಬಾಕ್ಸ್ ಟಿಕ್ ಮಾಡಿ, Get Document ಬಟನ್ ಕ್ಲಿಕ್ ಮಾಡಿದಾಗ, ನಿಮ್ಮ ಅಂಕಪಟ್ಟಿ ಡೌನ್ ಲೋಡ್ ಆಗುತ್ತದೆ.

ಈ ಡಿಜಿ ಲಾಕರ್‌ನ ಸೌಲಭ್ಯ ಪಡೆಯಲು ವಿದ್ಯಾರ್ಥಿಗೆ ಆಧಾರ್ ನಂಬರ್ ಕಡ್ಡಾಯವಾಗಿರುತ್ತದೆ. ವಿದ್ಯಾರ್ಥಿಯ ಆಧಾರ್ ಕಾರ್ಡ್‌ನಲ್ಲಿರುವ ಹೆಸರು ಮತ್ತು ಜನ್ಮ ದಿನಾಂಕ ಹಾಗೂ ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿರುವ ಹೆಸರು ಮತ್ತು ಜನ್ಮ ದಿನಾಂಕ ತಾಳೆ ಹೊಂದಿದಾಗ ಮಾತ್ರ ಅಂಕಪಟ್ಟಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಡಿಜಿಲಾಕರ್ ನಲ್ಲಿ ಡೌನ್ ಲೋಡ್ ಮಾಡಿಕೊಂಡ ಅಂಕಪಟ್ಟಿಯು ಡಿಜಿಟಲ್ ಅಂಕಪಟ್ಟಿಯಾಗಿದ್ದು, ಮೂಲ ಅಂಕಪಟ್ಟಿಗಳನ್ನು ಪ್ರತಿ ವರ್ಷದಂತೆ ಆಯಾ ಶಾಲೆಯಲ್ಲಿ ಪಡೆಯಬಹುದಾಗಿದೆ.

ಡಿಜಿ ಲಾಕರ್ ತಂತ್ರಾಂಶವನ್ನು ಬಳಸಿ ಅಂಕಪಟ್ಟಿಗಳನ್ನು ಡೌನ್ ಲೋಡ್ ಮಾಡಿಕೊಳ್ಳುವ ವಿಧಾನದ ಪೂರ್ಣ ಮಾಹಿತಿಯನ್ನು www.kseeb.kar.nic.in ಜಾಲತಾಣದಲ್ಲಿ ಪಡೆಯಬಹುದು.

ಮೇಲ್ಕಂಡ ಮಾಹಿತಿಯನ್ನು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಮುಖ್ಯ ಶಿಕ್ಷಕರ ಸಭೆಯಲ್ಲಿ ವಿವರಿಸಿ ವಿದ್ಯಾರ್ಥಿಗಳು ಈ ಸೌಲಭ್ಯವನ್ನು ಬಳಸಿಕೊಳ್ಳಲು ಅನುಕೂಲವಾಗುವಂತೆ ಕ್ರಮ ವಹಿಸುವುದು.

(ಸುಮಂಗಲ. ವಿ) 28/4
ನಿರ್ದೇಶಕರು, ಪರೀಕ್ಷೆಗಳು

**ಅಗತ್ಯ ಕ್ರಮಕ್ಕಾಗಿ:** 1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ರವರಿಗೆ
2. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ